ಅರಸಿಕೆರೆ	217.50	109.10
ಹೊಳೆನರಸಿಪುರ	216.55	149.10
ಅರಕಲಗೂಡು	139.30	68.30
ಸಕಲೇಶಪುರ	154.00	99.00
ಆಲೂರು	49.70	57.20
ಒಟ್ಟು	1362.05	817.20

ಕೃಷ್ಣಾ ಮೇಲ್ದಂಡೆ ಯೋಜನೆಗೆ ಬಳಕೆಯಾಗದೆ ಉಳಿದಿರುವ ಹಣ

484 (987): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಸುಮಾರು 37 ಕೋಟಿ ರೂ. ಹಣ ಬಳಕೆಯಾಗದೇ ಉಳಿದಿರುವುದು ನಿಜವೆ;

ಆ) ಹಾಗಿದ್ದಲ್ಲಿ, ಈ ಹಣವನ್ನು ಬಳಕೆ ಮಾಡದೇ ಇದ್ದುದ್ದಕ್ಕಾಗಿ ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು;

ಇ) ಬಳಕೆಯಾಗದೇ ಇದ್ದ ಹಣವನ್ನು ಲ್ಯಾಪ್ಸ್ ಮಾಡುತ್ತಿರುವುದರಿಂದ ಈ ಯೋಜನೆ ಕುಂಠಿತವಾಗುತ್ತಿರುವುದು ನಿಜವೆ;

ಈ) ಈ ವರ್ಷ ಆಯವ್ಯಯದಲ್ಲಿ ಎಷ್ಟು ಹಣ ಒದಗಿಸಲಾಗಿದ್ದಿತು ಮತ್ತು ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿರುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ಪ್ರಸಕ್ತ 1992–93ನೇ ಸಾಲಿನಲ್ಲಿ ಈ ಯೋಜನೆಗೆ 155 ಕೋಟಿ ರೂ.ಗಳ ಅನುದಾನವಿದ್ದು ಡಿಸೆಂಬರ್ 1992ರ ಕೊನೆಯ ವೇಳೆಗೆ 76.25 ಕೋಟಿ ರೂ. ವೆಚ್ಚವಾಗಿದೆ. ಬಳಕೆಯಾಗದೆ ಉಳಿಯುವ ಹಣದ ವಿವರವು ಆರ್ಥಿಕ ವರ್ಷ ಮುಗಿದ ನಂತರವೇ ತಿಳಿದು ಬರುತ್ತದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉತ್ತರವು (ಅ) ನಲ್ಲಿರುವಂತೆ.

ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಚಿಕ್ಕಬುದನೂರು ನೀರಾವರಿ ಕೆಲಸ ಪ್ರಾರಂಭ

486 (990): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):–

ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ಚಿಕ್ಕ ಬುದನೂರ ನೀರಾವರಿ ಕೆಲಸ ತೆಗೆದುಕೊಳ್ಳಲು

ಎಂದು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆಯೆಂದು ಮತ್ತು ಎಷ್ಟು ಹಣವನ್ನು ಇದಕ್ಕೆ ಮೆಂಜೂರು ಮಾಡಲಾಯಿತು;

ಆ) ಈ ಕೆಲಸಗಳಿಗೆ ತಾಂತ್ರಿಕ ಮಂಜೂರಾತಿಯನ್ನು ಎಂದು ನೀಡಲಾಯಿತು;

ಇ) ತಾಂತ್ರಿಕ ಮಂಜೂರಾತಿಯನ್ನು ನೀಡಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಹಾಗಿದ್ದಲ್ಲಿ ವಿನಾ ಕಾರಣ ವಿಳಂಬ ಮಾಡಲಿಕ್ಕೆ ಹತ್ತಿದ ಅಧಿಕಾರಿಗಳ ಮೇಲೆ ಸರ್ಕಾರದವರು ಕ್ರಮ ಕೈಗೊಳ್ಳುವರೆ;

ಉ) ಈ ವರ್ಷ ಕೆಲಸಕ್ಕೆ ಎಷ್ಟು ಹಣ ಒದಗಿಸಲಾಗಿದೆ ಮತ್ತು ಈ ವರ್ಷ ಆಯವ್ಯಯದಲ್ಲಿ ಒದಗಿಸಿದ ಹಣವನ್ನು ಖರ್ಚು ಮಾಡಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೆ;

ಊ) ಈ ಯೋಜನೆಯಿಂದ ಒಟ್ಟು ಎಷ್ಟು ಎಕರೆ ನೀರಾವರಿಯಾಗುವುದು ಮತ್ತು ಈ ಯೋಜನೆಯಿಂದ ಯಾವ ಯಾವ ಗ್ರಾಮದ ಜನರಿಗೆ ಲಾಭ ಪಡೆದುಕೊಳ್ಳಲು ಅನುಕೂಲವಾಗುವುದು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) 129.36 ಲಕ್ಷ ರೂ. ಅಂದಾಜಿಗೆ ಸರ್ಕಾರಿ ಆದೇಶ ನೀಇ 117 ಸನೀಬೆ 91 ದಿನಾಂಕ: 13.1.93ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಆ) ದಿನಾಂಕ 16.2.93

ಇ) ಉತ್ತರ (ಅ)ದ ಮೇರೆಗೆ ಉದ್ಭವಿಸುವುದಿಲ್ಲ.

ಈ) ಉತ್ತರ (ಅ)ದ ಮೇರೆಗೆ ಉದ್ಭವಿಸುವುದಿಲ್ಲ.

ಉ) 92-93ನೇ ಸಾಲಿನಲ್ಲಿ 40.00 ಲಕ್ಷ ರೂ. ಅನುದಾನ ಒದಗಿಸಲಾಗಿದ್ದು; ಇದನ್ನು ಖರ್ಚು ಮಾಡಲು ಎಲ್ಲಾ ಪ್ರಯತ್ನ ಮಾಡಲಾಗುವುದು.

ಊ) 1186 ಎಕರೆ ಚಿಕ್ಕಬುದನೂರು ಹಿರೇಬುದನೂರು ಮತ್ತು ಕುಟರನಟ್ಟಿ ಗ್ರಾಮಗಳ ಜನರು ಲಾಭ ಪಡೆಯುವರು.

ಕೊರಟಗೆರೆ ಟೌನ್ ಪ್ರಧಾನ ರಸ್ತೆಯ ರಿಪೇರಿ

487 (992): ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊರಟಗೆರೆ–ಮಧುಗಿರಿ ರಸ್ತೆ ಅಂದರೆ ಕೊರಟಗೆರೆ ಟೌನ್‌ನಲ್ಲಿ ಹಾದು ಹೋಗುವ ಪ್ರಧಾನ ರಸ್ತೆಯಲ್ಲಿ ಗುಂಡಿ ಬಿದ್ದು ಬಸ್ಸುಗಳು ಓಡಾಡಲು ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸದರಿ ರಸ್ತೆಯ ಎರಡು ಪಕ್ಕದಲ್ಲಿ ಡ್ರೈನೇಜು ಮಾಡಿ ರಸ್ತೆ ರಿಪೇರಿ ಅಥವಾ ರೀಅಸ್ಫಾಲ್ಟಿಂಗ್ ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?